**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ 9777/2021

ಸಿ.ಡಬ್ಲ್ಯೂ-4 ಪಿ.ಡಬ್ಲ್ಯೂ-8

| | | |
|---|---|---|
| ಹೆಸರು | ಃ | ಶಾಂತಪ್ಪ |
| ತಂದೆಃಗಂಡ | ಃ | ಶಂಕ್ರಪ್ಪ |
| ವಯಸ್ಸು | ಃ | 54 ವರ್ಷ |
| ಉದ್ಯೋಗ | : | ಕೂಲಿ |
| ವಾಸಸ್ಥಳ | ಃ | ಕೆರಿಅಂಬಲಗಾ |

ದಿನಾಂಕಃ30.11.2024

**ಸತ್ಯ ಪ್ರತಿಜ್ಞೆಯ ಮೇರೆಗೆ_**

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದಃ**

ಆರೋಪಿತರು ನನ್ನ ಸಂಬಂಧಿಕರು. ಚಾಸಾ-1 ಅಳಿಯ, ಚಾಸಾ-4 ಮಾವ, ಚಾಸಾ-5 ಹೆಂಡತಿ, ಚಾಸಾ-6 ಮಗಳು, ಚಾಸಾ-2, 3, 7 ರಿಂದ 9 ಪರಿಚಯ ಇರುತ್ತಾರೆ. ದಿ.14.08.2021 ರಂದು ಆರೊಪಿತರು ನಮ್ಮ ಮನೆಗೆ ಬಂದು ಚಾಸಾ-6 ರವರನ್ನು 1ನೇ ಆರೋಪಿಗೆ ಮದುವೆ ಮಾಡಿಕೊಡಬೇಕು ಎಂದು ಹೆಣ್ಣು ಕೇಳಲು ಬಂದಿದ್ದರು ನಾವು ಕೊಡುವುದಿಲ್ಲ ಎಂದು ಹೇಳಿದ್ದರಿಂದ ಜಗಳ ಮಾಡಿ ಚಾಕುವಿನಿಂದ ಚಾಸಾ-1 ರವರ ಬಲಗೈಗೆ ಗಾಯಪಡಿಸಿರುತ್ತಾರೆ. ಆ ಸಮಯದಲ್ಲಿ ಚಾಸಾ-1 ರವರ ಕೈಯಿಂದ ರಕ್ತ ಬರುತ್ತಿದ್ದು ಅವರ ಕೈಗೆ ಬಟ್ಟೆ ಕಟ್ಟಿ ನರೋಣಾ ಆಸ್ಪತ್ರೆಗೆ ದ್ವಿಚಕ್ರವಾಹನದ ಮೇಲೆ ನಾನು, ಚಾಸಾ-7 ರವರು ಕರೆದುಕೊಂಡು ಹೋಗಿದ್ದು ನಂತರ ಅಲ್ಲಿಂದ ಕಲಬುರಗಿ ಅಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ನಂತರ ಆಸ್ಪತ್ರೆಯಲ್ಲಿ ದಾಖಲಾದ ಬಳಿಕ ಪೋಲಿಸರು ಬಂದು ಹೇಳಿಕೆ ಪಡೆದಿರುತ್ತಾರೆ. ಸಾಕ್ಷಿಯು ಮು.ಮಾ.1 ನ್ನು ನೋಡಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ನಾನು ಘಟನೆ ನಡೆದ ದಿನ ಕೆಲಸಕ್ಕೆ ಹೋಗಿದ್ದೆ ಎಂದರೆ ಸರಿ. ಮದ್ಯಾಹ್ನ 1 ಗಂಟೆಗೆ ಮನೆಗೆ ಬಂದಾಗ ಚಾಸಾ-5 ರವರು ವಿಷಯ ತಿಳಿಸಿದರು ಎಂದರೆ ಸರಿ. 1ನೇ ಆರೋಪಿ ಬೋಸಡಿ ಮಕ್ಕಳೆ ನಿಮಗೆ ಖಲಾಸ ಮಾಡುತ್ತೇನೆ ಎಂದು ಅವಾಚ್ಯವಾಗಿ ಬೈದು ಚಾಕುವಿನಿಂದ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. 1ನೇ ಆರೋಪಿಯು ಚಾಸಾ-4 ರವರಿಗೆ ಚಪ್ಪಲಿಯಿಂದ ಹೊಡೆದಿರುತ್ತಾರೆ ಎಂದರೆ ಸಾಕ್ಷಿಯು ನಾವು ಚಾಸಾ-1 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದಾಗ ಹೊಡೆದಿರುತ್ತಾರೆ ಎಂದು ಹೇಳಿರುತ್ತಾರೆ. 3ನೇ ಆರೋಪಿ ಚಾಸಾ-6 ರವರ ಕೈ ಹಿಡಿದು ಬೆನ್ನ ಮೇಲೆ ಹೊಡೆದಿರುತ್ತಾರೆ ಎಂದರೆ ಸರಿ. ಚಾಸಾ-7 ಮತ್ತು 9 ರವರು ಜಗಳ ಬಿಡಿಸಿರುತ್ತಾರೆ ಎಂದು ಹೇಳಿರುತ್ತಾರೆ ಎಂದರೆ ಸರಿ. ಈ ರೀತಿ ಪೋಲಿಸರ ಮುಂದೆ ಹೇಳಿಕೆ ನಿಡಿರುತ್ತೇನೆ ಎಂದರೆ ಸರಿ. ಸಾಕ್ಷಿಯು ಮು.ಮಾ.2 ನ್ನು ನೋಡಿ ಗುರುತಿಸುತ್ತಾರೆ. ದಿ.17.08.2021 ರಂದು ಅಂಬಲಗಾ ಗ್ರಾಮದಲ್ಲಿ ಪೋಲಿಸರಿಗೆ ಹೇಳಿಕೆ ನಿಡಿರುತ್ತೇನೆ ಎಂದರೆ ಸರಿ.

**<u>ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ</u>**

ನಾನು ಬಿ.ಕಾಂ. ಪದವೀಧರ. ನಾನು ಮೇಲೆ ಹೇಳಿದಂತೆ ಇದೇ ಮೊದಲನೇ ಬಾರಿಗೆ ನ್ಯಾಯಾಲಯದಲ್ಲಿ ಹೇಳುತ್ತಿದ್ದೇನೆ ಎಂದರೆ ಸರಿ. ಚಾಸಾ-6 ರವರು ಗುಲಬರ್ಗಾದಲ್ಲಿ ಬಿ.ಎ. ವಿದ್ಯಾಭ್ಯಾಸ ಮಾಡುತ್ತಿದ್ದರು. ನನ್ನ ಮಗಳು ಮತ್ತು 1ನೇ ಆರೋಪಿ ಚಾಸಾ-1 ಮತ್ತು 4 ರವರ ಮನೆಗೆ ಆಗಾಗ ಹೋಗುತ್ತಿದ್ದರು ಎಂದರೆ ಸರಿ. ಚಾಸಾ-6 ಮತ್ತು 1ನೇ ಆರೋಪಿ ಪ್ರೀತಿ ವಾತ್ಸಲ್ಯದಿಂದ ಇದ್ದರು ಎಂದರೆ ಅವರು ಸಂಬಂಧಿಕರಾಗಿದ್ದರಿಂದ ಚೆನ್ನಾಗಿ ಮಾತನಾಡುತ್ತಿದ್ದರು ಎಂದು ನುಡಿಯುತ್ತರೆ. ಆರೋಪಿತರು ಚಾಸಾ-4 ರವರಿಗೆ 1ನೇ ಆರೋಪಿಗೆ ಚಾಸಾ-6 ರವರನ್ನು ಮದುವೆ ಮಾಡಿಕೊಡಬೇಕು ಎಂದು ಕೇಳಿದ್ದರು ಎಂದರೆ ನನಗೆ ಗೊತ್ತಿಲ್ಲ. ನನಗೆ ಚಾಸಾ-4 ರವರು ಆರೋಪಿತರು ನಮ್ಮ ಮನೆಗೆ ಹೆಣ್ಣು ಕೇಳಲು ಬರುತ್ತಿದ್ದಾರೆ ಎಂದು ಕರೆ ಮಾಡಿ ತಿಳಿಸಿರುವುದಿಲ್ಲ. ಆರೋಪಿತರು ನನಗೆ ಹೆಣ್ಣು ಕೇಳಲು ಬರುವ ವಿಷಯ ತಿಳಿಸಿದ್ದರು. ಸಾಮಾನ್ಯವಾಗಿ ಹೆಣ್ಣು ಕೇಳಲು ಬರುವಾಗ ಬರುವವರು 4-5 ಜನ ಹಿರಿಯರನ್ನು ಕರೆದುಕೊಂಡು ಬರುತ್ತಾರೆ ಮತ್ತು ಹೆಣ್ಣಿನ ಮನೆಯವರು ಸಹ ಹಿರಿಯರನ್ನು ಕರೆಯಿಸಿರುತ್ತಾರೆ ಎಂದರೆ ಸರಿ.ಆರೋಪಿತರು ಹೆಣ್ಣು ಕೇಳಲು ಬಂದಾಗ ನಮ್ಮ ಮನೆಯಲ್ಲಿ ಚಾಸಾ-5, 6 ಮಾತ್ರ ಇದ್ದರು. ಆರೋಪಿತರು 8.00 ರಿಂದ 8.30 ರ ವರೆಗೆ ಬಂದಿರುತ್ತಾರೆ. ಆ ಸಮಯದಲ್ಲಿ ಚಾಸಾ-5 ರವರು ಚಾಸಾ-7, 9 ರವರನ್ನು ಕರೆಯಿಸಿರುತ್ತಾರೆ. ನಾನು ಆ ಸಮಯದಲ್ಲಿ ಮನೆಯಲ್ಲಿ ಇರಲಿಲ್ಲ ಎಂದರೆ ಸರಿ. ನಾನು 1.00 ಗಂಟೆಗೆ ಮನೆಗೆ ಬಂದಿರುತ್ತೇನೆ. ನಾನು ಮನೆಗೆ ಬಂದಾಗ ಚಾಸಾ-1, 4, 7, 9, 5, 6 ರವರು ಇದ್ದರು. 1ನೇ ಆರೋಪಿ ಚಾಕುವಿನಿಂದ ಚಾಸಾ-1 ರವರಿಗೆ ಹಲ್ಲೆ ಮಾಡಿದ್ದರಿಂದ ನೆಲದ ಮೇಲೆ ರಕ್ತ ಬಿದ್ದಿತ್ತಾ ಎಂದರೆ ಸಾಕ್ಷಿಯು ನಾನು ಬಂದ ನಂತರ ಆರೋಪಿ ಹಲ್ಲೆ ಮಾಡಿರುತ್ತಾನೆ ಎಂದು ನುಡಿಯುತ್ತಾರೆ. ಮು.ಮಾ.1 ಮತ್ತು 2 ನ್ನು ಇವತ್ತೇ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿ. ನಾನು ಮತ್ತು ಚಾಸಾ-7 ರವರು ಚಾಸಾ-1 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದ ದ್ವಿಚಕ್ರವಾಹನದ ಸಂಖ್ಯೆ ಹೇಳಲು ಬರುವುದಿಲ್ಲ ಆದರೆ ಸದರಿ ವಾಹನ ಚಾಸಾ-7 ರವರದ್ದು ಇತ್ತು. ನರೋಣಾದಲ್ಲಿ ನಾವು ಮೊದಲು ಆಸ್ಪತ್ರೆಗೆ ಹೋಗಿರುತ್ತೇವೆ. ಅಲಿಲ ನಾವು ಅರ್ಧ ಗಂಟೆ ಇದ್ದೇವು. ಸದರಿ ಆಸ್ಪತ್ರೆಯವರು ಎಂಎಲಸಿ ದಾಖಲಿಸಿರುತ್ತಾರೆ ಮತ್ತು ಪೋಲಿಸರು ಬಂದು ವಿಚಾರಣೆ ಮಾಡಿರುತ್ತಾರೆ. 1ನೇ ಆರೋಪಿಯು ಚಾಸಾ-1 ರವರಿಗೆ ಚಾಕುವಿನಿಂದ ಬಲಗೈ ಅಂಗೈ ಮೇಲೆ ಹಲ್ಲೆ ಮಾಡಿರುತ್ತಾರೆ ಮತ್ತು ಆ ಸಮಯದಲ್ಲಿ ಚಾಸಾ-1 ರವರ ತಲೆಗೂ ಪೆಟ್ಟಾಗಿರುತ್ತದೆ. ಚಾಸಾ-6 ರವರನ್ನು 1ನೇ ಆರೋಪಿಗೆ ಕೊಡಬಾರದು ಎಂಬ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ.1 ಮತ್ತು 2 ನ್ನು ಪೋಲಿಸರಿಗೆ ಯಾರು ನೀಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ದಿ.14.08.2021 ರಂದು ಆರೋಪಿತರು ನಮ್ಮ ಮನೆಗೆ ಬಂದು ಚಾಸಾ-6 ರವರನ್ನು 1ನೇ ಆರೋಪಿಗೆ ಮದುವೆ ಮಾಡಿಕೊಡಬೇಕು ಎಂದು ಹೆಣ್ಣು ಕೇಳಲು ಬಂದಿದ್ದರು ನಾವು ಕೊಡುವುದಿಲ್ಲ ಎಂದು ಹೇಳಿದ್ದರಿಂದ ಜಗಳ ಮಾಡಿ ಚಾಕುವಿನಿಂದ ಚಾಸಾ-1 ರವರ ಬಲಗೈಗೆ ಗಾಯಪಡಿಸಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಚಾಸಾ-1 ರವರ ಕೈಯಿಂದ ರಕ್ತ ಬರುತ್ತಿದ್ದು ಅವರ ಕೈಗೆ ಬಟ್ಟೆ ಕಟ್ಟಿ ನರೋಣಾ ಆಸ್ಪತ್ರೆಗೆ ದ್ವಿಚಕ್ರವಾಹನದ ಮೇಲೆ ನಾನು, ಚಾಸಾ-7 ರವರು ಕರೆದುಕೊಂಡು ಹೋಗಿದ್ದು ನಂತರ ಅಲ್ಲಿಂದ ಕಲಬುರಗಿ ಅಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಆಸ್ಪತ್ರೆಯಲ್ಲಿ ದಾಖಲಾದ ಬಳಿಕ ಪೋಲಿಸರು ಬಂದು ಹೇಳಿಕೆ ಪಡೆದಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ–** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.